## ನೀನೇ ಬಾರಮ್ಮ!



ನಳಿನಿ, ಮನೆ ಕೆಲಸದ ರುಕ್ಕಮ್ಮನಿಗೆ ತರಕಾರಿ ತರಲು ಅಂಗಡಿಗೆ ಕಳಿಸಿದಳು.

ತರಕಾರಿ ತಂದ ರುಕ್ಕಮ್ಮ, 'ಅಮ್ಮಾವ್ರೆ ತರಕಾರಿ ಅಂಗಡಿಯವನಿಗೆ ನೀವು ಪರಿಚಯವಂತೆ' ಎಂದಾಗ, ನಳಿನಿ ನನ್ನ ಕಥೆ–ಕವನಗಳನ್ನು ಗಮನಿಸಿರಬಹುದು ಎಂದು ತಿಳಿದುಕೊಂಡು ರುಕ್ಕಮ್ಮನಿಗೆ 'ನನ್ನ ಬಗ್ಗೆ ಇನ್ನೇನಾದರೂ ಅಂಗಡಿಯವನು ಹೇಳಲಿಲ್ಲವೇ?' ಎಂದು ಕೇಳಿದರು. ರುಕ್ಮಮ್ಮ,'ಹೇಳಿದ್ರು ಅಮ್ಮಾವ್ರೆ, ನಿಮ್ಮ ಯಜಮಾನಿ ತರಕಾರಿ ತೆಗೆದುಕೊಳ್ಳುವಾಗ ಬಹಳ ಚೌಕಾಸಿ ಮಾಡುತ್ತಾರೆ, ಇನ್ಮೇಲೆ ತರಕಾರಿಗೆ ನೀನೇ ಬಾರಮ್ಮ ಎಂದರು' ಅಂದಾಗ ನಳಿನಿಗೆ ಯಾಕಾದರೂ ಕೇಳಿದನೋ ಅನಿಸಿತು!

**ಶಂಕರೇಗೌಡ ತುಂಬಕೆರೆ**

## ಮುಂಜಾಗ್ರತೆ

ಹಬ್ಬಕ್ಕೆಂದು ಸಿಟಿಗೆ ಹೋಗಿ ರೇಷ್ಮೆ ಸೀರೆ ಖರೀದಿಗಾಗಿ ಶಾಪಿಂಗ್ ಮಾಡಲು ಗುಂಡ ಹಾಗೂ ಆತನ ಹೆಂಡತಿ ವಿಶಾಲು ನಿರ್ಧರಿಸಿ ಹೊರಡಲು ರೆಡಿ ಆದ್ರು. ವಿಶಾಲು ಮೇಕಪ್ ಮಾಡಿಕೊಂಡು, ಕೈಯಲ್ಲಿ ವ್ಯಾನಿಟಿ ಬ್ಯಾಗ್ ಹಿಡಿದು ಸಿದ್ಧಳಾದಳು.

ಗುಂಡ ಕ್ಯಾರಿಬ್ಯಾಗ್‌ವೊಂದರಲ್ಲಿ ಒಂದು ಬಿಸ್ಕೆಟ್ ಪಾಕೆಟ್, ಒಂದೆರಡು ಬಾಳೆಹಣ್ಣು, ಒಂದು ನೀರಿನ ಬಾಟಲಿ ತೆಗೆದುಕೊಂಡ.

'ಏನ್ರೀ ಇದು?' ವಿಶಾಲು ಅರ್ಥವಾಗದೆ ಆಶ್ಚರ್ಯದಿಂದ ಗುಂಡನನ್ನು ಪ್ರಶ್ನಿಸಿದಳು.

'ಅಲ್ವೇ... ಹೋಗ್ತಾ ಇರೋದು ಸೀರೆ ಸೆಲೆಕ್ಷನ್‌ಗೆ ಅದೂ ನಿನ್ನ ಜತೆ. ಅಷ್ಟು ಮುಂಜಾಗ್ರತೆ ಬೇಡವೇನೇ' ಎಂದ. ಗಂಡ ಗುಂಡನ ಮುಂದಾಲೋಚನೆಗೆ ಪತ್ನಿ ವಿಶಾಲು ತಲೆದೂಗಿದಳು.

**ಚಂದ್ರಕುಮಾರ್ ಡಿ.**



ಕಲೆ: ಗಣೇಶ ಆಚಾರ್ಯ